ಚಿತ್ರಗಳು: ಎಂ.ಎಸ್. ಮಂಜುನಾಥ್

ಮುಂಬೈ, ಚೆನ್ನೈ, ಹೈದರಾಬಾದ್, ಕೋಲ್ಕತ್ತಾಗಳಂಥ ನಗರಗಳ ಸ್ಥಿತಿಯೇನೂ ಭಿನ್ನವಲ್ಲ. ಒಟ್ಟಾರೆ ಪ್ರತಿ ವರ್ಷ ಲಕ್ಷಾಂತರ ಕೋಟಿ ರೂಪಾಯಿ ಟ್ರಾಫಿಕ್ ಜಾಮ್ ಕಾರಣದಿಂದಾಗಿ ನಷ್ಟ ಸಂಭವಿಸುತ್ತಿದೆ.

'ಪ್ರತಿ ದಿನ ಟ್ರಾಫಿಕ್ ಜಾಮ್‌ನಿಂದಾಗಿ ಒಂದೂವರೆಯಿಂದ ಎರಡು ತಾಸುಗಳು ರಸ್ತೆಯಲ್ಲಿ ಕಳೆಯುವಂತಾಗಿದೆ. ಇದೇ ಅವಧಿಯನ್ನು ಕಚೇರಿಯಲ್ಲಿ ಕೆಲಸ ಮಾಡುವುದಕ್ಕೆ ಬಳಸಿದ್ದರೆ ಹೆಚ್ಚುವರಿ ಸಂಬಳ ದೊರೆಯುತ್ತಿತ್ತು' ಎನ್ನುತ್ತಾರೆ ಎಲೆಕ್ಟ್ರಾನಿಕ್ ಸಿಟಿಯ ಸಂಸ್ಥೆಯೊಂದರಲ್ಲಿ ದುಡಿಯುವ ಎಲ್. ಆರ್. ಚಂದ್ರಶೇಖರ್. ಅವರ ಮನೆಯಿರುವುದು ಬೆಂಗಳೂರಿನ ಮತ್ತೊಂದು ಮೂಲೆಯಾದ ದೇವಸಂದ್ರದಲ್ಲಿ. ಇದೆಲ್ಲ ಪಡಿಪಾಟಲೇಕೆ, ಎಲೆಕ್ಟ್ರಾನಿಕ್ ಸಿಟಿಯಲ್ಲೇ ಮನೆ ಮಾಡಿಕೊಂಡಿರಬಹುದಲ್ಲ ಎಂದು ಪ್ರಶ್ನಿಸಿದರೆ – 'ಅಲ್ಲಿರುವುದು ನಮ್ಮನೆ, ಸ್ವಂತಮನೆ, ಅಪ್ಪ–ಅಮ್ಮ ಸೇರಿದಂತೆ ಕುಟುಂಬ ಇರುವ ಮನೆ' ಎನ್ನುವ ಭಾವನಾತ್ಮಕ ಪ್ರತಿಕ್ರಿಯೆಯನ್ನು ಚಂದ್ರಶೇಖರ್ ನೀಡುತ್ತಾರೆ. ಅವರೇನೋ ಸ್ವಂತ ಮನೆಯ ಮಂದಿ. ಆದರೆ, ಬಾಡಿಗೆ ಮನೆಯವರ ತವಕ ತಲ್ಲಣಗಳ ಸ್ವರೂಪ ಬೇರೆಯದೇ. ತಮ್ಮ ಪರಿಚಯದವರು ಇರುವ ಸ್ಥಳ ಹಾಗೂ ಕಡಿಮೆ ಬಾಡಿಗೆಯ ಮನೆಗಳಿಗೆ ಅವರು ಆದ್ಯತೆ ನೀಡುತ್ತಾರೆ. ಕೆಲಸದ ಸ್ಥಳ ದೂರವಾದರೂ ಪರವಾಗಿಲ್ಲ ಎಂದು ಭಾವಿಸುತ್ತಾರೆ. ಇದರಿಂದಾಗಿ ಟ್ರಾಫಿಕ್‌ನಲ್ಲಿ ಹೈರಾಣಾಗುವುದು ಅನಿವಾರ್ಯ. ಗಂಡನದೊಂದು ಕಡೆ ಕೆಲಸ, ಹೆಂಡತಿಯದು ಇನ್ನೊಂದು ಕಡೆ ಕೆಲಸ ಎನ್ನುವ ಸಂದರ್ಭದಲ್ಲೂ ಇಬ್ಬರಲ್ಲಿ ಒಬ್ಬರಾದರೂ ಸಮೀಪ ನೌಕರಿಸ್ಥಳದ ಸುಖ ತ್ಯಾಗ ಮಾಡದೆ ವಿಧಿಯಿಲ್ಲ.

## ಮಕ್ಕಳಿಗೂ ಕಾಟ ತಪ್ಪಿದ್ದಲ್ಲ

ಮಕ್ಕಳು ಕೂಡ ಟ್ರಾಫಿಕ್ ಸಮಸ್ಯೆಯಿಂದ ಪಾರಾಗಿಲ್ಲ. ಮನೆ ಇರುವಲ್ಲಿಯೇ ಶಾಲೆಗಳಿಗೆ ಪ್ರವೇಶ ದೊರೆಯಬೇಕೆಂದು ನಿರೀಕ್ಷಿಸುವುದು ಕಷ್ಟ. ಅಂತೆಯೇ ಒಳ್ಳೆಯ ಶಾಲೆಗಳು ಮನೆಗೆ ಸಮೀಪದಲ್ಲಿ ಇರಬೇಕೆಂದು ನಿರೀಕ್ಷಿಸುವುದೂ ಕಷ್ಟ. ಇದರಿಂದಾಗಿ ಐದಾರು ಕಿ.ಮೀ. ದೂರದ, ಕೆಲವೊಮ್ಮೆ ಹತ್ತು ಕಿ.ಮೀ.ಗಳಿಗೂ ಹೆಚ್ಚು ದೂರದ ಶಾಲೆಗಳಿಗೆ ಮಕ್ಕಳು ಹೋಗಿಬರುವುದಿದೆ. ಶಾಲಾ ವ್ಯಾನ್ ಸೌಲಭ್ಯವಿದ್ದರೂ ಟ್ರಾಫಿಕ್ ಜಾಮ್ ರಿಯಾಯತಿಯೇನೂ ವಿದ್ಯಾರ್ಥಿಗಳಿಗೆ ದೊರೆಯುವುದಿಲ್ಲ. ಎಳೆಯ ವಯಸ್ಸಿನಲ್ಲಿ ಮಾಲಿನ್ಯಕ್ಕೆ ಒಡ್ಡಿಕೊಳ್ಳುವುದರಿಂದ ದೈಹಿಕ ಸಮಸ್ಯೆಗಳ ಜೊತೆಗೆ ಮಾನಸಿಕ ಕ್ಷೋಭೆಗೂ ಒಳಗಾಗುವ ಸಾಧ್ಯತೆಯಿದೆ.

ಪರಿಸರ ಮಾಲಿನ್ಯ, ಸಂಚಾರ ವಿಳಂಬ, ಹೆಚ್ಚು ಇಂಧನ ಬಳಕೆ, ಅಪಘಾತ, ನೇರ ಹಾಗೂ ಪರೋಕ್ಷ ಆರ್ಥಿಕ ನಷ್ಟಗಳು – ಇವೆಲ್ಲವೂ ಟ್ರಾಫಿಕ್ ಜಾಮ್‌ನ ಅಡ್ಡ ಪರಿಣಾಮಗಳೇ ಆಗಿವೆ.

ನಗರಗಳಲ್ಲಿ ಪ್ರತಿ ದಿನವೂ ಒಂದಲ್ಲಾ ಒಂದು ಕಾಮಗಾರಿ ನಡೆಯುತ್ತಿರುತ್ತದೆ. ಈ ಕಾಮಗಾರಿಗಳು ಟ್ರಾಫಿಕ್ ಜಾಮ್ ಹೆಚ್ಚಿಸುವುದರ ಜೊತೆಗೆ ಸಾರ್ವಜನಿಕರಿಗೆ ದೂಳಿನ ಸ್ನಾನವನ್ನೂ ಮಾಡಿಸುತ್ತವೆ. ಬಸ್ಸು, ಟ್ರಕ್‌ಗಳಂಥ ವಾಹನಗಳ ಅಡ್ಡಾದಿಡ್ಡಿ ಓಡಾಟ ಕೂಡ ದೂಳು ಸೃಷ್ಟಿಯಗಲು ಕಾರಣವಾಗುತ್ತವೆ. ಮಳೆ, ಪ್ರತಿಭಟನಾ ಮೆರವಣಿಗೆಗಳು, ಅಪಘಾತಗಳು, ಅಸಮರ್ಪಕ ಸಂಚಾರ ವ್ಯವಸ್ಥೆ – ಇವೆಲ್ಲವೂ ಸೇರಿಕೊಂಡು ಟ್ರಾಫಿಕ್ ಸಮಸ್ಯೆಯನ್ನು ಮತ್ತಷ್ಟು ವಿಷಮಗೊಳಿಸುತ್ತವೆ. ವಾಹನ ಸವಾರರದು ಒಂದು



ಟ್ರಾಫಿಕ್ ಜಾಮ್‌ಗೆ ಬೇಸತ್ತು ಪ್ರಯಾಣಿಕರು ಅರ್ಧದಲ್ಲಿ ಇಳಿದುಹೋದಾಗ ಆಟೋ ಡ್ರೈವರ್‌ಗಳಿಗೆ ನಿದ್ದೆಯೇ ಗತಿ


ಟ್ರಾಫಿಕ್ ಜಾಮ್ ನಡುವೆ ಹೊಟ್ಟೆ ತುಂಬಿಸಿಕೊಳ್ಳುತ್ತಿರುವ ಆಟೋ ಚಾಲಕ

